ಸಿಬ್ಬಂದಿಗಳ ಎದುರು, 'ನಮ್ಮ ಕಡೆ ರೊಕ್ಕ ತೀರತ್ರಿ, ಡಿಸ್ಚಾರ್ಜ ಮಾಡಿಬಿಡ್ರಿ, ಇನ್ನು ನಮಗ ನೀಗೂದಿಲ್ರಿ' ಎಂದು ಗೋಗರೆದು ಮನೆಗೆ ಒಯ್ಯುತ್ತಾರೆ.

ಡಾಕ್ಟರ್ ಅಂತೂ ಯಾರನ್ನೂ ಆರಾಮಾತು ಹೋಗಿನ್ನು ಅಂತ ಕಳಿಸಿದ ದಾಖಲೆ ಇಲ್ಲ. 'ನಿಮ್ಮದೇ ರಿಸ್ಕ್ ಮೇಲೆ ನೀವು ಒಯ್ಯೂದಿದ್ದರ ಒಯ್ಯರಿ, ಆಮೇಲೆ ಡಾಕ್ಟರ ಕಡೆ ಒಯ್ದರೂ ಆರಾಮಾಗಿಲ್ಲಾ ಅಂತ ಹೆಸರಿಡಬ್ಯಾಡ್ರಿ' ಅಂತ ಒದರಾಡುತ್ತಾನೆ. ಐದಾರು ದಿನ ಆಸ್ಪತ್ರೆ ತಿರುಗಾಡಿ ನಿದ್ದೆ- ದುಡ್ಡು ಕಳಕೊಂಡವರು, 'ಏ ಇಲ್ಲರಿ ಸರ್ ಹಂಗೇನು ಹೇಳೂದಿಲ್ಲರಿ' ಅನ್ನುತ್ತ ಮನೆ ಕಡೆಗೆ ಓಡುತ್ತಾರೆ. ಆಮೇಲೆ ಈ ವಿಷಯ ಜಗಜ್ಜಾಹೀರ ಆದರೂ ನಮ್ಮೂರ ಮಂದಿ ನಿರುಪಾಯರು. ಮುದುಕರು ತದುಕರಿಗೆ ರೋಗ-ರುಜಿನ ಅಂತ ಬಂದಾಗ ಇದ್ದೊಬ್ಬ ಸ್ಪೆಷಲಿಸ್ಟ ಹತ್ತಿರ ಹೋಗಲೇಬೇಕು ಹಾಗೂ ಇದನ್ನೆಲ್ಲ ವಾರಗಟ್ಟಲೆ ಅನುಭವಿಸಲೇಬೇಕು. ಅದಕ್ಕಾಗಿ ಒಬ್ಬ ಗಟ್ಟಿ ಮನುಷ್ಯ ಆಸ್ಪತ್ರೆ ಚಾಕರಿಗೆ ಟೊಂಕ ಕಟ್ಟಿ ನಿಲ್ಲಬೇಕು. ಆತ ರೋಗಿಯ ರಕ್ತ ಸಂಬಂಧಿ ಆಗಿರದಿದ್ದರೆ ಒಳ್ಳೆಯದು. ಏಕೆಂದರೆ ಆ ಸಂದರ್ಭದಲ್ಲಿ ರಕ್ತ ಸಂಬಂಧಿಗಳು ರೋಗಿಯ ಬಗ್ಗೆ ಭಾವಾವೇಶವನ್ನು ಹೊಂದಿರುತ್ತಾರೆ. ಆತನಿಗೆ ಏನಾಗಿದೆಯೋ ಎಂಬ ಆತಂಕದಲ್ಲಿ ಒದ್ದಾಡುತ್ತಿರುತ್ತಾರೆ. ಎಷ್ಟೇ ಹಣ ವೆಚ್ಚವಾದರೂ ಪರವಾಗಿಲ್ಲ ಆತ ಆರಾಮಾಗಲಿ ಎನ್ನುವ ಮನೋಭಾವವನ್ನು ಹೊಂದಿರುತ್ತಾರೆ. ಇದನ್ನು ಅರ್ಥ ಮಾಡಿಕೊಂಡ ಆಸ್ಪತ್ರೆಯ ಸಿಬ್ಬಂದಿ, ರೋಗಿಯ ಕಡೆಯ ಜನರು ತಮ್ಮ ಸಾಮರ್ಥ್ಯದ ಹಣವನ್ನು ವೆಚ್ಚ ಮಾಡುವುದಕ್ಕಾಗಿ ಎಲ್ಲ ವ್ಯವಸ್ಥೆ ಮಾಡುತ್ತಾರೆ. ತಮ್ಮಲ್ಲಿರುವ ಎಲ್ಲ ವಿಧದ ಟೆಸ್ಟುಗಳನ್ನು ಮಾಡಿಸಿ ರಿಪೋರ್ಟು ತರಿಸುತ್ತಾರೆ. ಐಸಿಯು, ಆಕ್ಸಿಜನ್ ಇತ್ಯಾದಿ ಸೌಲಭ್ಯಗಳನ್ನು ಕೊಡಬೇಕು ಎಂದು ಹಣ ಕೀಳುತ್ತಾರೆ. ಆಗ ಈ ಕಣ್ಣೀರು ಒರೆಸಿಕೊಳ್ಳುವ ಸಂಬಂಧಿಗಳ ಜೊತೆಗೆ ಕಣ್ಣೀರು ಬರದೇ ಇರುವ ಕ್ಲಿಯರ್ ಕಣ್ಣಿನ ಮನುಷ್ಯ ಇದ್ದರೆ ಆತ ಬಿಲ್ ಓದುತ್ತಾನೆ, ಇದ್ಯಾಕೆ ಕೊಟ್ರಿ? ಅದ್ಯಾಕೆ ಇಟ್ರಿ ಅಂತ ಪ್ರಶ್ನೆ ಕೇಳುತ್ತಾನೆ. ನಿನ್ನೆ ಕಿಡ್ನಿ ಸರಿ ಇತ್ತಲ್ರಿ ಇವತ್ಯಾಕೆ ಕೆಡ್ತಿ? ಅಂತ ತನಿಖೆ ನಡೆಸುತ್ತಾನೆ. ಹೀಗೊಬ್ಬ ಸ್ಪಷ್ಟ ವಿಚಾರದ, ಅಸಂಬಂಧಿ ರೋಗಿಯ ಉಪಚಾರದ ತಂಡದಲ್ಲಿ ಇದ್ದರೆ ತಕ್ಷಣ ಆಸ್ಪತ್ರೆ ಸಿಬ್ಬಂದಿ ಎಚ್ಚೆತ್ತುಕೊಳ್ಳುತ್ತಾರೆ. ಸುಮ್ಮನೆ ಸಿಕ್ಕಿ ಹಾಕಿಕೊಳ್ಳುವುದ್ಯಾಕೆ ಅಂತ ತಮ್ಮ ಹಣ ಎಳೆಯುವ ಕೆಲಸ ಮೊಟಕು ಮಾಡಿ ಡಿಸ್ಚಾರ್ಜ್ ಮಾಡಿ ಕಳಿಸುತ್ತಾರೆ.

ಈ ಕಾರಣಕ್ಕಾಗಿ ಎನ್ ಪತಿ ತನ್ನ ಪರಿಚಯದ ಬಂಧು- ಬಾಂಧವರು ಆಸ್ಪತ್ರೆಗೆ ಹೋಗುವಾಗ ಅಸಂಬಂಧಿಯಾಗಿ ಜೊತೆಗೆ ಹೋಗುತ್ತಾನೆ. ಕೇವಲ ಆಸ್ಪತ್ರೆಯ ಸೇವೆ ಒಂದೇ ಅಲ್ಲ ತನ್ನ ಗೆಳೆಯರ ಬೇರೆ ಬೇರೆ ಅಗತ್ಯಗಳಿಗೆ ಆತ ಒದಗುತ್ತಾನೆ. ಒಮ್ಮೊಮ್ಮೆ ಗೆಳೆಯರು ಅಂತಲೂ ಅಲ್ಲ ಅಷ್ಟೇನೂ ಹತ್ತಿರದ ಪರಿಚಯದವರಲ್ಲದ ಕೇವಲ ಮುಖ ಪರಿಚಯ ಮಾತ್ರ ಇರುವವರ ಅಗತ್ಯಕ್ಕೆ ಒದಗುವುದಕ್ಕಾಗಿ ಧಾವಿಸುತ್ತಾನೆ. ಇದೇಕೆ ಹೀಗೆ ಎಂದರೆ ಅವನಲ್ಲಿರುವ ಗುಣ ಅಥವಾ ಸ್ವಭಾವ. ಅದನ್ನು ಆಂಗ್ಲಭಾಷೆಯಲ್ಲಿ 'ಎಂಪತಿ' ಎನ್ನುತ್ತಾರೆ. ಈ ಪದದ ಡಿಕ್ಶನರಿ ಅರ್ಥ ಬಹಳ ಸ್ವಾರಸ್ಯಕರವಾಗಿದೆ. ಇನ್ನೊಬ್ಬರ ಪಾದರಕ್ಷೆಯಲ್ಲಿ ನಿಂತುಕೊಳ್ಳುವುದು. ಎಷ್ಟು ಚೆಂದದ ವ್ಯಾಖ್ಯಾನವಲ್ಲವೆ? ಒಬ್ಬ ವ್ಯಕ್ತಿ ಯಾವ ಸ್ಥಿತಿಯಲ್ಲಿದ್ದಾನೆ ಎನ್ನವುದು ತಿಳಿಯಬೇಕಾದರೆ ಅವನೇ ನಾವಾಗಬೇಕು. ಅವನ ಅಂಗಿಯಲ್ಲಿ ಮೈಯಿಳಿಸಿದರೂ ಪೂರ್ತಿ ಅವನ ಸ್ಥಿತಿ ತಿಳಿಯುವುದಿಲ್ಲ. ಏಕೆಂದರೆ ಅಂಗಿ ಎನ್ನುವುದು ಸೊಂಟಕ್ಕಿಂತ ಮೇಲಿನ ಪರಿಸ್ಥಿತಿಯನ್ನು ಮಾತ್ರ ತಿಳಿಸುತ್ತದೆ. ಅವನ ಪ್ಯಾಂಟು ಹಾಕಿಕೊಂಡರೂ ಕೂಡ ದೇಹದ ಮೇಲಿನ ಭಾಗದ ಕಷ್ಟ ಗೊತ್ತಾಗುವುದಿಲ್ಲ. ಆದ್ದರಿಂದ ಚಪ್ಪಲನ್ನು ಹಾಕಿಕೊಳ್ಳುವುದು ಅಂದರೆ ತಾತ್ಕಾಲಿಕವಾಗಿ ಅವನೇ ಆಗುವುದು. ಯಾರಲ್ಲಿ ಈ ಸ್ವಭಾವವಿರುತ್ತದೆಯೋ ಅವರನ್ನು ಎಂಪತಿ ಇರುವವರು ಎಂದು ಕರೆಯಬಹುದು. ಎನ್ನ ಪತಿಗೆ ಈ ಸ್ವಭಾವ ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ಇರುವ ಕಾರಣದಿಂದ ಇನ್ನೊಬ್ಬರ ಅಸಹಾಯಕ ಸ್ಥಿತಿಯನ್ನು ಅವರಿಗಿಂತಲೂ ಮೊದಲು ಇವನೇ ಗುರುತಿಸುತ್ತಾನೆ. ಅಂದರೆ ಅವರ ಚಪ್ಪಲಿಯೊಳಗೆ ಅವರು ಅದನ್ನು ಹಾಕಿಕೊಂಡಿರುವಾಗಲೇ ಅವನು ಕಾಲು ತೂರಿಸಿ ನಿಲ್ಲುವ ಶಕ್ತಿ ಹೊಂದಿದ್ದಾನೆ. ಅದಕ್ಕಾಗಿ ಅವನಿಗೆ ಅವರ ಕಡೆಯಿಂದ ಸಹಾಯ ಯಾಚನೆಯ ವಿನಂತಿಯ